**ಮಾನ್ಯ ಸಿವಿಲ್ ನ್ಯಾಯಾಧೀಶರು ವ ಜೆ ಎಂ ಎಫ್‌ಸಿ ಮುದ್ದೇಬಿಹಾಳ, ಇವರ ನ್ಯಾಯಾಲಯ**

ಸಿ ಸಿ ನಂಃ702/2017
ಸಿಡಬ್ಲೂ-13
ಪಿ.ಡಬ್ಲ್ಯೂ-12

| | | |
|---|---|---|
| ಸಾಕ್ಷಿದಾರನ ಹೆಸರು | ಃ | ಡಾಃ ಈರಗಂಟೆಪ್ಪ ತಳ್ಳೊಳ್ಳಿ |
| ತಂದೆಯ ಹೆಸರು | ಃ | ಭೀಮಣ್ಣ |
| ವಯಸ್ಸು | ಃ | 37 ವರ್ಷ |
| ಉದ್ಯೋಗ | ಃ | ವೈದ್ಯಾಧಿಕಾರಿಗಳು, |
| ವಾಸಸ್ಥಳ | ಃ | ತಾಳಿಕೋಟಿ |

(ದಿಃ21/03/2024 ರಂದು ಸಾಕ್ಷಿಯನ್ನು ಕರೆಸಿ ಸತ್ಯ ಪ್ರತಿಜ್ಞೆ ಮಾಡಿಸಲಾಯಿತು)

**ಮುಖ್ಯ ವಿಚಾರಣೆ ಸ ಸ ಅ ಅವರಿಂದ**

ನಾನು ಏಪ್ರಿಲ್-2016 ರಿಂದ ಇಲ್ಲಿಯವರೆಗೆ ತಾಳಿಕೋಟಿ ಸಮುದಾಯ ಆರೋಗ್ಯ ಕೇಂದ್ರ್ರದಲ್ಲಿ ವೈದ್ಯಾಧಿಕಾರಿ ಎಂದು ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿನಾಂಕಃ 16/07/2017 ರಂದು ರಾತ್ರಿ 10.20 ರಿಂದ 11.30 ರ ಅವಧಿಯಲ್ಲಿ ಮೃತ ಭೀಮಪ್ಪ ಶಿವಪ್ಪ ಕರದಳ್ಳಿ, ವಯಸ್ಸುಃ65 ವರ್ಷ, ಇವರ ಮೃತ ದೇಹವನ್ನು ಪಿ ಸಿ ನಂಃ 496 ತಾಳಿಕೋಟಿ ಠಾಣೆ ರವರು ಶವ ಪರೀಕ್ಷೆಗಾಗಿ ಆಸ್ಪತ್ರೆಗೆ ತೆಗೆದುಕೊಂಡು ಬಂದಿದ್ದು, ಸದರಿ ಮೃತ ದೇಹದ ಶವ ಪರೀಕ್ಷೆಯನ್ನು ಮಾಡಿರುತ್ತೇನೆ. ಮೃತ ಭೀಮಪ್ಪ ಇವರಿಗೆ ಅತಿಯಾದ ರಕ್ತಸ್ರಾವ ಆದಕಾರಣ ಮತ್ತು ಅತಿಯಾದ ಮೂಳೆ ಮುರಿತಗಳು ಆದಕಾರಣ ಮೃತಪಟ್ಟಿರುತ್ತಾರೆ. ಸದರಿ ಗಾಯಗಳು ರಸ್ತೆ ಅಪಘಾತದಲ್ಲಿ ಸಂಭವಿಸಿದ ಗಾಯಗಳು ಆಗಿರುತ್ತವೆ. ಸಾಕ್ಷಿಯು ಶವ ಪರೀಕ್ಷಾ ವರದಿಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು **ನಿಪಿ-12** ಎಂದು, ಸಾಕ್ಷಿಯ ಸಹಿಯನ್ನು **ನಿಪಿ-12(ಎ)** ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಶ್ರೀ ಆರ್ ವಾಯ್ ಎನ್ ವಕೀಲರಿಂದ ಆರೋಪಿ ಪರವಾಗಿ**

ದಿಃ 16/07/2017 ರಂದು ನಾನು ಕರ್ತವ್ಯದಲ್ಲಿದ್ದೆ ಎಂದು ತೋರಿಸಲು ನ್ಯಾಯಾಲಯದ ಮುಂದೆ ಯಾವುದೇ ದಾಖಲಾತಿಗಳನ್ನು ಹಾಜರಪಡಿಸಿರುವುದಿಲ್ಲ. ಮೃತದೇಹವನ್ನು ನಾನು ಶವ ಪರೀಕ್ಷಾ ಜರುಗಿಸುವ ಒಂದು ಗಂಟೆ ಪೂರ್ವದಲ್ಲಿ ತಂದಿರುತ್ತಾರೆ. ನಿಪಿ-12 ನ್ನು ನಾನು ದಿಃ 25/07/2017 ರಂದು ಕೊಟ್ಟಿರುತ್ತೇನೆ. ನಾನು ಮೃತ ಭೀಮಪ್ಪನ ಶವ ಪರೀಕ್ಷೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಮೃತ ಭೀಮಪ್ಪನ ಶವವನ್ನು ನಮ್ಮ ಆಸ್ಪತ್ರೆಗೆ ತಂದಿರುವುದಿಲ್ಲ ಎಂದರೆ ಸರಿಯಲ್ಲ. ಪೋಲಿಸರ ಮಾತು ಕೇಳಿ ನಿಪಿ-12 ರಂತೆ ಸುಳ್ಳು ದಾಖಲಾತಿಯನ್ನು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಮೃತ ಭೀಮಪ್ಪನಿಗೆ ಆದ ಗಾಯಗಳು ಅಪಘಾತದಲ್ಲಿ ಸಂಭವಿಸಿದ ಗಾಯಗಳು ಆಗಿರುತ್ತವೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಹೊಡೆದಾಟದಲ್ಲಿಯು ಸಹ ಮೇಲೆ ಹೇಳಿದ ಗಾಯಗಳು ಸಂಭವಿಸಬಹುದು ಎಂದು ನುಡಿಯುತ್ತಾರೆ. ಘಟನೆಯಲ್ಲಿ ಮೃತಪಟ್ಟ ವ್ಯಕ್ತಿ ಬೇರೆಯಾಗಿದ್ದು, ನಾನು ನಿಪಿ-12 ರಲ್ಲಿ ನಮೂದಿಸಿದ ವ್ಯಕ್ತಿ ಬೇರೆಯಾಗಿರುತ್ತಾನೆ ಎಂದರೆ ಸರಿಯಲ್ಲ.

ನಮೂನೆ ನಂಃ 146(2) ರಲ್ಲಿ ಭೀಮಪ್ಪ ಉರ್ಫಃ ಭೀಮಶಿ ತಂದೆ. ಶಿವಪ್ಪ ಕಿರದಳ್ಳಿ ಉರ್ಫಃ ಹರಿಜನ ಅಂತಾ ಇರುತ್ತದೆ ಎಂದರೆ ಸರಿ. ನಿಪಿ-12 ರಲ್ಲಿ ಮೃತನ ಅಡ್ಡ ಹೆಸರು ಕರದಳ್ಳಿ ಅಂತಾ ನಮೂದಿಸಿರುತ್ತೇನೆ ಎಂದರೆ ಸರಿ. ಮೃತ ಭೀಮಪ್ಪ ಹೇಗೆ ತೀರಿಕೊಂಡಿರುತ್ತಾನೆ ಎಂದು ನಾನು ವಿಚಾರಿಸಿರುವುದಿಲ್ಲ. ಘಟನೆ ಬಗ್ಗೆ ಯಾವುದೇ ಮಾಹಿತಿ ಇರದೇ ಇದ್ದರೂ ಸಹಿತ ಮೃತ ಭೀಮಪ್ಪನಿಗೆ ಆದ ಗಾಯಗಳು ಅಪಘಾತದಲ್ಲಿ ಸಂಭವಿಸಿದ ಗಾಯಗಳು ಆಗಿರುತ್ತವೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮೃತನ ಕುಟುಂಬಕ್ಕೆ ಪರಿಹಾರ ಧನ ಸಿಗಲು ಅನುಕೂಲ

ಮಾಡಿಕೊಡಲೆಂದು ಮೃತ ಭೀಮಪ್ಪನಿಗೆ ಅತಿಯಾದ ರಕ್ತಸ್ರಾವ ಮತ್ತು ಅತಿಯಾದ ಮೂಳೆ ಮುರಿತ ಆಗಿರುತ್ತದೆ ಎಂದು ಸುಳ್ಳು ವರದಿ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

ಶವ ಪರೀಕ್ಷೆ ಜರುಗಿಸುವ ಸಮಯದಲ್ಲಿ ನಾನು ಯಾವುದೇ ಫೋಟೋ ತೆಗೆದಿರುವುದಿಲ್ಲ ಎಂದರೆ ಸರಿ. ಸುಳ್ಳು ವರದಿ ನೀಡಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ಓ ಹೇ ಕೇ ಸರಿ ಅದೆ.

ನ್ಯಾದಂ ಪ್ರ ವರ್ಗ, ಮುದ್ದೇಬಿಹಾಳ.